ಯಾರು ಜಾಗ ಕಳೆದುಕೊಳ್ಳುತ್ತಾರೋ ಅಂತಹ ಪ್ರತಿಯೊಬ್ಬರಿಗೂ ಆಸಂಸ್ಥೆಯಲ್ಲಿ ಉದ್ಯೋಗವನ್ನು ನೀಡುವ ರೀತಿಯಲ್ಲಿ 'ಪ್ಯಾಕೇಜ್ ಡೀಲ್' ಒಂದನ್ನು ಮಾಡಿದರೆ ಉತ್ತಮವಾಗುತ್ತದೆಂದು ನಾನು ಮಾನ್ಯ ಸಚಿವರಿಗೆ ತಿಳಿಸುತ್ತಿದ್ದೇನೆ. ಮಾನ್ಯ ಸಚಿವರು ಅವರಿಗೆ ಜಾಗ ಕೊಡುವ ಬಗ್ಗೆ ಅವರಿಗೆ ಬೇಕಾದಂತಹ ಆಸ್ಪತ್ರೆ, ಶಾಲೆ ಮುಂತಾದ ನಾಗರೀಕ ಸೌಲಭ್ಯಗಳು ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನೂ ಕೂಡ ಅಲ್ಲಿ ಮಾಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಸರ್ಕಾರದ ಸ್ಪಷ್ಟವಾದ ನೀತಿಯನ್ನು ಘೋಷಿಸಬೇಡವೆಂದು ಕೋರುತ್ತೇನೆ. ಈಗ ಸರ್ಕಾರದಲ್ಲಿ ಅಂತಹ ಸ್ಪಷ್ಟವಾದ ನೀತಿಯಿಲ್ಲ. ಆದ್ದರಿಂದ ಆದಷ್ಟು ಬೇಗ ರಾಜ್ಯದಲ್ಲಿ ಹೊಸದಾಗಿ ಬರುವಂತಹ ಉದ್ದಿಮೆಗಳಿಗೆಲ್ಲಕ್ಕೂ ಅನ್ವಯಿಸುವಂತಹ 'ಪ್ಯಾಕೇಜ್ ಡೀಲ್' ಅನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ.

ಬೆಂಗಳೂರು ನಗರದಲ್ಲಿ ಪ್ರಯಾಣಿಕರಿಗೆ ತೊಂದರೆ

147 (1360) ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಅದರಲ್ಲೂ ಮುಖ್ಯವಾಗಿ ಪೀಕ್ ಹವರ್ಸ್‌ನಲ್ಲಿ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದೆ ಪ್ರಯಾಣಿಕರು ಸಹಿಸಲಾಗದಷ್ಟು ತೊಂದರೆಯನ್ನು ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಸೂಕ್ತ ವ್ಯವಸ್ಥೆಯನ್ನು ಕೈಗೊಳ್ಳಲಿದೆಯೇ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸದ್ಯ ಪ್ರತಿದಿನ 2121 ಅನುಸೂಚಿಗಳನ್ನು 36, 395 ಸುತ್ತುವಳಿಗಳ 5.05 ಲಕ್ಷ ಕಿ.ಮೀಗಳೊಂದಿಗೆ ಆಚರಣೆ ಮಾಡಿ ಸುಮಾರು 26 ಲಕ್ಷ ಪ್ರಯಾಣಿಕರಿಗೆ ಪ್ರಯಾಣ ಸೌಲಭ್ಯ ಒದಗಿಸುತ್ತಿದೆ. ಈ ಪೈಕಿ ಪ್ರಯಾಣಿಕರ ಅಧಿಕ ಒತ್ತಡದ (ಪೀಕ್ ಹವರ್) ವೇಳೆಗಳಲ್ಲಿ ಮುಂಜಾನೆ ಹಾಗೂ ಸಂಜೆ ಕಛೇರಿ ನೌಕರರು ಹಾಗೂ ಇನ್ನಿತರ ಪ್ರಯಾಣಿಕರ ಅನುಕೂಲಕ್ಕಾಗಿ ಒಟ್ಟು 267 ಪ್ರತ್ಯೇಕ ಸುತ್ತುವಳಿಗಳನ್ನು ಆಚರಣೆ ಮಾಡುತ್ತಿದ್ದು ಇವುಗಳಲ್ಲಿ 20 ಸುತ್ತುವಳಿಗಳನ್ನು ಮಹಿಳೆಯರಿಗಾಗಿಯೇ ವಿಶೇಷವಾಗಿ ಒದಗಿಸಿದೆ.

ಆ) ಸಂಸ್ಥೆಯಲ್ಲಿ ಪ್ರಯಾಣಿಕರಿಗೆ ಉತ್ತಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸಂಸ್ಥೆಯು 17ನೇ ಕಾರ್ಯಾಲಯವನ್ನು ಚಂದ್ರಾಲೇಔಟ್‌ನಲ್ಲಿ ಪ್ರಾರಂಭಿಸುವುದು.
2. ಬನಶಂಕರಿ, ಫೈಟ್ ಫೀಲ್ಡ್ ಮತ್ತು ಎಲೆಕ್ಟ್ರಾನಿಕ್ ಸಿಟಿ ಈ ಮೂರು ಸ್ಥಳಗಳಲ್ಲಿ ಹೊಸ ಡಿಪೋಗಳನ್ನು ನಿರ್ಮಾಣ ಮಾಡುವುದು.

3. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಎಲ್ಲಾ ಡಿಪೋಗಳನ್ನು ಕಂಪ್ಯೂಟೀಕರಣ ಮಾಡುವುದು.

4. ಶಿವಾಜಿನಗರದಲ್ಲಿ ಸುಮಾರು ರೂ. 8 ಕೋಟಿ ವೆಚ್ಚದಲ್ಲಿ ನೂತನ ಮಾದರಿಯ ಬಸ್ ನಿಲ್ದಾಣ ಹಾಗೂ ಸಬ್‌ವೇ ನಿರ್ಮಾಣ.

5. ಜನಪ್ರಿಯ ವಾಹಿನಿ ಬಸ್ಸುಗಳ ಸಂಖ್ಯೆ ಹೆಚ್ಚಿಸುವುದು.

6. ಹಳೇ ಬಸ್ಸುಗಳ ಸ್ಥಾನದಲ್ಲಿ ಹೊಸ ಬಸ್ಸುಗಳನ್ನು ಹಾಕುವುದು.

7. ಬಸ್ಸುಗಳ ಆಚರಣೆಯನ್ನು ಜಿ.ಪಿ.ಎಸ್: ಜಿ.ಐ.ಎಸ್. ವ್ಯವಸ್ಥೆಯಿಂದ ನಿಯಂತ್ರಿಸುವುದು.

8. ಬೆಂಗಳೂರು ನಗರದಲ್ಲಿ ಮೆಟ್ರೋ ಬಸ್ಸುಗಳನ್ನು ಆಚರಣೆ ಮಾಡುವುದು.

9. ಬೆಂಗಳೂರು ಮಹಾನಗರ ಪಾಲಿಕೆಯವರ ಸಹಕಾರದಿಂದ ನೂತನ ವಿನ್ಯಾಸದ ಒಂದೇ ಅಳತೆಯುಳ್ಳ ಬಸ್ ತಂಗುದಾಣವನ್ನು ನಿರ್ಮಾಣ ಮಾಡುವುದು.

10. ಈಗಾಗಲೇ ಇರುವ 104 ಬಾಡಿಗೆ ಆಧಾರದ ಖಾಸಗೀ ಬಸ್ಸುಗಳ ಜೊತೆಗೆ ಇನ್ನೂ 200 ಖಾಸಗಿ ಬಸ್ಸುಗಳನ್ನು ಬಾಡಿಗೆಗೆ ಪಡೆದು ಕಾರ್ಯಾಚರಿಸಲಾಗುವುದು.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಈಗ ಪೀಕ್ ಅವರ್ಸ್‌ನಲ್ಲಿ ಪ್ರಯಾಣ ಮಾಡುವ ಅನೇಕ ಜನರಿಗೆ ತೊಂದರೆಯಾಗಿದೆ ಮತ್ತು ಅವರು ಫುಟ್‌ಬೋರ್ಡ್‌ಗಳಲ್ಲಿ ಕೂಡ ಪ್ರಯಾಣ ಮಾಡುವಂತಾಗಿದೆ. ಈ ತೊಂದರೆ ನಿವಾರಿಸಲು ತಾವೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ?

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಉತ್ತರವನ್ನು ನೀಡಿದ್ದೇನೆ. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಪೀಕ್ ಅವರ್ಸ್‌ನಲ್ಲಿ ಸಂಚರಿಸುವ ಬಸ್ಸುಗಳಲ್ಲಿ ಹೆಚ್ಚಿನ ಪ್ರಯಾಣಿಕರಿದ್ದು ಅವರು ತೊಂದರೆ ಅನುಭವಿಸುತ್ತಿರುವುದರ ಬಗ್ಗೆ ನನ್ನ ಸಂಸ್ಥೆಗೆ ಮತ್ತು ನನಗೆ ಅರಿವಿದೆ. ಈಗಿರುವಂತಹ ಬಸ್ಸಿನ ಸಂಚಾರವನ್ನು ವ್ಯವಸ್ಥಿತವಾಗಿ ನಡೆಯುವುದರ ಜೊತೆಗೆ ಇನ್ನೂ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದರ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಖಾಸಗಿ ಬಸ್ಸುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ನಾವು ಆಲೋಚನೆ ಮಾಡಿ, ಈಗಾಗಲೇ ಅದಕ್ಕಾಗಿ ಟೆಂಡರ್ ಸಹ ಕರೆದಿದ್ದೇವೆ. ಟೆಂಡರ್‌ಗಳು ಸಹ ಬಂದಿವೆ. ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಓಡಿಸುವುದಕ್ಕೆ ನಮಗೆ ಅಗತ್ಯವಾಗಿ 700 ಬಸ್ಸುಗಳು ಅಗತ್ಯ ಇದೆ. ನಾವು ಈಗ 200 ಬಸ್ಸುಗಳಿಗಾಗಿ ಟೆಂಡರ್‌ಗಳನ್ನು ಕರೆದು, ಅದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. ಸದ್ಯದಲ್ಲೇ ಆ ಬಸ್ಸುಗಳೂ ಕೂಡ ಸಂಚಾರಕ್ಕೆ ಬರಲಿದೆ. ಆ ಬಸ್ಸುಗಳು ಸಂಚಾರಕ್ಕೆ ಬಂದನಂತರ ಈ ಒತ್ತಡ ಕಡಿಮೆಯಾಗುವಂತಹ ಸಾಧ್ಯತೆಗಳಿವೆ. ಇದರ ಜೊತೆಗೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಸಂಚರಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಹತ್ತಾರು ಕಾರ್ಯಕ್ರಮಗಳನ್ನು ನಮ್ಮ ಸಂಸ್ಥೆ ಹಮ್ಮಿಕೊಂಡಿದೆ. ಇಷ್ಟು ವಿಚಾರಗಳನ್ನು ಮಾನ್ಯ ಅಧ್ಯಕ್ಷರ ಮೂಲಕವಾಗಿ ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಈಗ ಬೆಂಗಳೂರು ನಗರದಲ್ಲಿ ಎಷ್ಟು ಜನಪ್ರಿಯ ಮಾಹಿನಿ ಬಸ್ಸುಗಳು ಸಂಚರಿಸುತ್ತಿವೆ ?

ಶ್ರೀ .ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸುಬ್ಬಾರೆಡ್ಡಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿರ್ಮಾಹಕ ರಹಿತ ಬಸ್ಸುಗಳಾಗಿ 'ಜನಪ್ರಿಯವಾಹಿನಿ' ಎಂಬ ಹೊಸ ಮಾದರಿಯ ಬಸ್ಸುಗಳನ್ನು 'ಓಡಿಸಲು ನನ್ನ ಸಂಸ್ಥೆ ಪ್ರಯತ್ನ ನಡೆಸುತ್ತಿದೆ. 'ಜನಪ್ರಿಯವಾಹಿನಿ'ಯ 9 ಬಸ್ಸುಗಳನ್ನು ನಗರ ಸಂಚಾರಕ್ಕಾಗಿ ಬಿಡಲಾಗಿದೆ. ಅವುಗಳು ಯಶಸ್ವಿಯಾಗುವಂತಹ ಸೂಚನೆಗಳು ನನಗೆ ದೊರಕಿದೆ. ಇಂತಹ ಬಸ್ಸುಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಪ್ರಯತ್ನದಲ್ಲಿ ನಾವಿದ್ದೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಹಿಳೆಯರಿಗೆ ಮೊದಲು ವಿಶೇಷ ಬಸ್ಸುಗಳು ಇದ್ದವು. ಪೀಕ್ ಅವರ್ಸ್ ಎಲ್ಲಾ ಸಮಯದಲ್ಲಿಯೂ ಕೂಡ ಈಗ ಈ ವಿಶೇಷ ಬಸ್ಸುಗಳು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಮಹಿಳೆಯರು ಮತ್ತು ಮಕ್ಕಳಿಗೆ ತೊಂದರೆಯಾಗುತ್ತಿದೆ. ಸರ್ಕಾರದವರು ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಪೀಕ್ ಅವರ್ಸ್‌ನಲ್ಲಿ ಬಸ್ಸುಗಳನ್ನು ಓಡಿಸುವ ಏರ್ಪಾಡು ಮಾಡುತ್ತಾರೆಯೇ?

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 16 ಬಸ್ಸುಗಳನ್ನು ಪ್ರತ್ಯೇಕವಾಗಿ ನಾವು ಮಹಿಳೆಯರಿಗಾಗಿಯೇ ಓಡಿಸುತ್ತಿದ್ದೇವೆ. ಗೌರವಾನ್ವಿತ ಸದಸ್ಯರು ವಿದ್ಯಾಭ್ಯಾಸ ಮಾಡುವ ಮಕ್ಕಳಿಗಾಗಿ ಪ್ರತ್ಯೇಕವಾಗಿ ಬಸ್ಸುಗಳನ್ನು ಓಡಿಸುವಂತಹ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಪರಿಶೀಲಿಸುತ್ತದೆ ಎಂದು ನಾನು ಅವರಿಗೆ ತಿಳಿಸ ಬಯಸುತ್ತೇನೆ

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಸಾರಿಗೆ ಸಂಸ್ಥೆಯ ಚಾಲಕರು ಬಸ್ಸುಗಳನ್ನು ರಸ್ತೆಯ ಮಧ್ಯೆದಲ್ಲೇನಿಲ್ಲಿಸಿ ಬಿಡುತ್ತಾರೆ. ಬಹುಶಃ ಅವರಿಗೆ ಆ ಬಗ್ಗೆ ಯಾರೂ ಹೇಳಿಲ್ಲವೇನೋ. ರಸ್ತೆ ಮಧ್ಯದಲ್ಲೇ ಬಸ್ಸುಗಳನ್ನು ನಿಲ್ಲಿಸುವುದರಿಂದ ಸಂಚಾರಕ್ಕೆ ಅಪಾರ ಅಡಚಣೆಯಾಗುತ್ತದೆ. ಇನ್ನು ಬಸ್ಸುಗಳಲ್ಲಂತೂ ಸ್ವಚ್ಛತೆ ಎಂಬುದು ಇರುವುದೇ ಇಲ್ಲ. ಯಾವ ಬಸ್ಸಿನಲ್ಲಿ ಸುಳಿಸುಳಿಕೊಳ್ಳಬೇಕಾದರೂ ಸಹ ನಾವೇ ಕ್ಲೀನ್ ಮಾಡಿಕೊಂಡು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇದೆ. ಮಾನ್ಯ ಸಚಿವರು ಯಾವತ್ತಾದರೂ ಇಂತಹ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡಿದ್ದೀರಾ ?

ಶ್ರೀ ಸಿ.ಆರ್.ಸಗೀರ್ ಅಹಮದ್ : ನಾನು ಈ ಹಿಂದೆಯೇ ಹೇಳಿದಂತೆ ನಾವು ಬಸ್ಸುಗಳ ಸ್ವಚ್ಛತೆ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತೇವೆ. ಈಗ ಮತ್ತೊಮ್ಮೆ ಅದರ ಬಗ್ಗೆ ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತರುತ್ತಿದ್ದಾರೆ. ಸ್ವಚ್ಛತೆ ಕಾಪಾಡಿಕೊಂಡು ಹೋಗುವಂತಾದ್ದು ನನ್ನ ಸಂಸ್ಥೆಯ ಜವಾಬ್ದಾರಿಯಾಗುತ್ತದೆ. ಅದರ ಬಗ್ಗೆ ನಾವು ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ರಸ್ತೆಯ ಮಧ್ಯಭಾಗದಲ್ಲೇ ವಾಹನ ನಿಲ್ಲಿಸುವಂತಹ ಸಾರಿಗೆ ಸಂಸ್ಥೆಯ ಚಾಲಕರ ವಿರುದ್ಧ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಈಗಾಗಲೇ 456 ಮೊಕದ್ದಮೆಗಳನ್ನು ಹೂಡಲಾಗಿದೆ. ಆ ಬಗ್ಗೆ ಪತ್ರಿಕೆಗಳಲ್ಲಿಯೂ ಕೂಡ ಬಂತು, ತಾವು ಅದನ್ನು ಓದಿರಬಹುದು. ಇನ್ನು ಮುಂದಿನ ದಿನಗಳಲ್ಲಿ ಸಾರಿಗೆ ಸಂಸ್ಥೆಯ ಚಾಲಕರಿಗೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಬಸ್ಸುಗಳನ್ನು ನಿಲ್ಲಿಸುವ ಬಗ್ಗೆ ಸ್ಪಷ್ಟವಾದಂತಹ ಸೂಚನೆಗಳನ್ನು ಕೊಡುತ್ತೇವೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಹಳ ದೊಡ್ಡ ಕೆಲಸವನ್ನು ಮಾಡುತ್ತಿದೆ. ಆದರೆ ಕಳೆದ ಐದಾರು ವರ್ಷಗಳಿಂದ ನಾವು ಬೆಂಗಳೂರು ನಗರವನ್ನು ನೋಡುತ್ತಿದ್ದೇವೆ. ಇವತ್ತು ಈ ನಗರದಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆ ಹೆಚ್ಚಾಗಲಿಕ್ಕೆ ಸಾರಿಗೆ ಸಂಸ್ಥೆಯೇ ಕಾರಣವಾಗಿದೆ. ಮುಂಬೈನಲ್ಲಿರುವಂತೆ ವ್ಯವಸ್ಥಿತವಾಗಿ ನಮಗೆ ಬಸ್ಸು ಸಿಗುತ್ತದೆ ಎನ್ನುವಂತಹ ವಿಶ್ವಾಸ ನಗರದ ಜನತೆಗೆ ಇದಿದ್ದರೆ ಬೆಂಗಳೂರು ನಗರದಲ್ಲಿ ಸುಮಾರು 12 ಲಕ್ಷದಷ್ಟು ದ್ವಿಚಕ್ರ ವಾಹನಗಳು ರಸ್ತೆಗಿಳಿಯುತ್ತಿರಲಿಲ್ಲ. ಫುಟ್‌ಬೋರ್ಡ್‌ಗಳಲ್ಲಿ ನಿಂತುಕೊಂಡು ಪ್ರಯಾಣ ಮಾಡುವುದು ನಮ್ಮ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಿಸಿದ್ದಾರೆ. ನಾನು ಈ ಸರ್ಕಾರ ಆ ಸರ್ಕಾರ ಎಂದು ಕಾಮೆಂಟ್ ಮಾಡುತ್ತಿಲ್ಲ. ಈ ಸಮಸ್ಯೆ ಬಹಳ ವರ್ಷಗಳಿಂದಲೂ ಸಾರಿಗೆ ಸಂಸ್ಥೆಯ ಗಮನಕ್ಕೆ ಬಂದಿದ್ದರೂ ಕೂಡ ಇವತ್ತು ನೀವು ಇದಕ್ಕೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಆಗಾಗ ಸಮಯಕ್ಕೆ ಸರಿಯಾಗಿ ನೀವು ಕ್ರಮಗಳನ್ನು ತೆಗೆದುಕೊಂಡಿದ್ದರೆ ಬೆಂಗಳೂರು ನಗರದ ಮಾಹಿತಿ ಪ್ರಕಾರ ಇಷ್ಟೊಂದು ಹೆಚ್ಚಾಗುತ್ತಿರಲಿಲ್ಲ ಮತ್ತು ಜನ ಆಗಾಗ ಸಾರಿಗೆ ಸಂಸ್ಥೆಯ ವಾಹನಗಳಲ್ಲೇ ಹೆಚ್ಚಾಗಿ ಪ್ರಯಾಣಿಸುತ್ತಿದ್ದುದರಿಂದ ನಗರದಲ್ಲಿ ಇಷ್ಟೊಂದು ಮಾಲಿನ್ಯ ಕೂಡ ಆಗುತ್ತಿರಲಿಲ್ಲ. ದ್ವಿಚಕ್ರ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕೆ ಸಾರಿಗೆ ಸಂಸ್ಥೆಯಾದ ಒಂದು ಲಾಂಗ್ ರೇಂಜ್ ಕಾರ್ಯಕ್ರಮಗಳನ್ನು ತಾಳಿಕೊಳ್ಳುತ್ತಬೆಯೇ ಎಂದು ಕೇಳಬಯಸುತ್ತೇನೆ. ಎರಡನೆಯದಾಗಿ, ಮಾನ್ಯ ಸುಬ್ಬಾರೆಡ್ಡಿಯವರು ಹೇಳಿದಂತೆ ಇದ್ದಕ್ಕಿದ್ದ ಹಾಗೆ ಬೆಂಗಳೂರಿನಲ್ಲಿ ಟ್ರಿಪ್‌ಗಳು ಕ್ಯಾನ್ಸಲ್ ಆಗುತ್ತಿರುತ್ತವೆ. ವಿಶೇಷವಾಗಿ ಪಿ.ಹೆಚ್.ಎನ್. ಬಸ್ಸುಗಳ ಟ್ರಿಪ್‌ಗಳು ರದ್ದಾಗುತ್ತದೆ. ಕಛೇರಿಗಳಿಂದ ಮನೆಗೆ ಹೋಗುವುದಕ್ಕಾಗಿ ನೌಕರರು ಪಿ.ಹೆಚ್.ಎಸ್. ಬಸ್ಸುಗಳಿಗಾಗಿ ಕಾಯುತ್ತಾ ನಿಂತಿದ್ದರೂ ಕೂಡ 5-30 ಅಥವಾ 5-40ಕ್ಕೆ ಬರಬೇಕಾದ ಬಸ್ಸು 6 ಗಂಟೆಯಾದರೂ ಬರುವುದೇ ಇಲ್ಲ. 6 ಗಂಟೆಯಾದ ಮೇಲೆ ಇವತ್ತು ಬಸ್ಸು ಕ್ಯಾನ್ಸಲ್ ಆಗಿದೆ ಎಂದು ನೌಕರರು ತಿಳಿದುಕೊಂಡು ಬೇರೆ ಬೇರೆ ಬಸ್ಸುಗಳನ್ನು ಹಿಡಿದುಕೊಂಡು ಮನೆಗಳಿಗೆ ಹೋಗಬೇಕಾಗುತ್ತದೆ. ಈ ರೀತಿ ಇದ್ದಕ್ಕಿದ್ದ ಹಾಗೆ ಟ್ರಿಪ್‌ಗಳನ್ನು ಕ್ಯಾನ್ಸಲ್ ಮಾಡುವುದನ್ನು ನಿಲ್ಲಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ ಪ್ರಯಾಣಿಕರ ಒತ್ತಡ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಒತ್ತಡವನ್ನು ನಿವಾರಿಸಲು ನಮಗೆ ಅಗತ್ಯವಾಗಿ ಸಮೀಕ್ಷೆಯ ಪ್ರಕಾರ 700 ಬಸ್ಸುಗಳು ಬೇಕಾಗಿರುತ್ತದೆ. 500 ಬಸ್ಸುಗಳನ್ನು ಒದಗಿಸಿಕೊಡುವುದರ ಬಗ್ಗೆ ನಾವು ಈಗಾಗಲೇ ಚಿಂತನೆಯನ್ನು ಮಾಡಿದ್ದೇವೆ. ಟೆಂಡರ್ ಕರೆದು ಈಗಾಗಲೇ ನಾವು 200 ಬಸ್ಸುಗಳನ್ನು ಸಂಚಾರಕ್ಕೆ ಬಿಡುವಂತಹ ವ್ಯವಸ್ಥೆಯಲ್ಲಿ ಇದ್ದೇವೆ. 700 ಬಸ್ಸುಗಳನ್ನು ಒಂದೇ ಬಾರಿಗೆ ಸಂಚಾರಕ್ಕೆ ಬಿಡಲು ಸಂಸ್ಥೆಗೆ ಹೊರೆಯಾಗುತ್ತದೆ. ನನ್ನ ಹಾಗೆ ಸಂಸ್ಥೆಯ ಆರ್ಥಿಕ ಸ್ಥಿತಿ ಅಷ್ಟೊಂದು ಉತ್ತಮವಾಗಿಲ್ಲ. ಅದಕಾರಣ ನಾವು ಈ ಎಲ್ಲಾ ಬಸ್ಸುಗಳನ್ನೂ ಒಮ್ಮೆಗೇ ಒಡಿಸುವಂತಹ ಸ್ಥಿತಿಯಲ್ಲಿ ಇಲ್ಲ. ಇನ್ನು ಬಸ್ಸುಗಳು ಸಮಯಕ್ಕೆ ಸರಿಯಾಗಿ ಬಾರದಿರುವುದು ಮತ್ತು ಟ್ರಿಪ್‌ಗಳು ಕ್ಯಾನ್ಸಲ್ ಆಗುವುದರ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಚಾಲಕರ ಕೊರತೆ ಇದೆ. ಚಾಲಕರ ಹುದ್ದೆಗಳನ್ನು ತುಂಬಲು ನಾವು ಈಗಾಗಲೇ ಸಂದರ್ಶನ ಇತ್ಯಾದಿಗಳನ್ನು ನಡೆಸಿದ್ದೇವೆ. ಅನೇಕ ಪತ್ರಿಕೆಗಳಲ್ಲಿಯೂ ಕೂಡ ಈ ವಿಚಾರ ಬಂದಿದೆ. 1,500 ಚಾಲಕರ ಕೊರತೆ ನಮಗೆ ಸದ್ಯಕ್ಕೆ ಇದೆ. ಕೃಪಾಂಕ ವಿಚಾರವಾಗಿ ನಮ್ಮ ಸರ್ಕಾರ ಈ ಚಾಲಕರ ನೇಮಕಾತಿಯನ್ನು ತಡೆ ಹಿಡಿದಿದೆ. ಚಾಲಕರ ಅಗತ್ಯತೆ ಬಹಳ ಇರುವುದರಿಂದ ಈ ಹುದ್ದೆಗಳನ್ನು ತುಂಬಲು

ಅನುಮತಿ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈಗಾಗಲೇ ವಿನಂತಿಸಿಕೊಂಡಿದ್ದೇನೆ. ಅದು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿರುವಂತಹ ವಿಚಾರವಾಗಿದೆ. ತಮ್ಮೆಲ್ಲರ ಸಹಕಾರದಿಂದ ಅದಕ್ಕೆ ಅನುಮತಿಯನ್ನು ನಾನು ಪಡೆದುಕೊಳ್ಳುತ್ತೇನೆ. ದ್ವಿಚಕ್ರ ವಾಹನಗಳ ಸಂಖ್ಯೆನ್ನು ಕಡಿಮೆ ಮಾಡುವುದರ ಬಗ್ಗೆ ಸರ್ಕಾರ ಸಾಕಷ್ಟು ಆಲೋಚನೆಗಳನ್ನು ಮಾಡುತ್ತಿರುವಂತಹ ವಿಚಾರ ತಮಗೆಲ್ಲರಿಗೂ ಗೊತ್ತೇ ಇದೆ. ಬೆಂಗಳೂರು ಸುತ್ತಮುತ್ತ ಇಎಲ್‌ಆರ್‌ಟಿಎಸ್ ಎಂಬ ಹಗುರ ರೈಲು ಸಂಚಾರವನ್ನು ಆರಂಭಿಸುವ ಪ್ರಸ್ತಾವನೆ ಈಗ ಸರ್ಕಾರದ ಮುಂದಿದೆ. ಮೋನೋ ಬಸ್ಸುಗಳ ಸಂಚಾರ ಆರಂಭಿಸುವ ಬಗ್ಗೆ ಪ್ರಸ್ತಾವನೆ ಕೂಡ ಸರ್ಕಾರದ ಮುಂದಿದೆ. ಈ ಯೋಜನೆಗಳೆಲ್ಲವೂ ಕೂಡ ತಕ್ಷಣವೇ ಬರುವಂತಹ ಸಾಧ್ಯತೆಗಳಿವೆ. ಇದೆಲ್ಲಾ ಯೋಜನೆಗಳು ಕಾರ್ಯಗತವಾದಾಗ ಪ್ರಯಾಣಿಕರ ಒತ್ತಡವಾಗಲೀ, ದ್ವಿಚಕ್ರ ವಾಹನಗಳು ಒತ್ತಡವಾಗಲೀ ಕಡಿಮೆಯಾಗುವಂತಹ ಸಾಧ್ಯತೆ ಇದೆ ಎಂದು ತಮ್ಮ ಮುಖಾಂತರವಾಗಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ವಾಣಿಜ್ಯ ಮಳಿಗೆಗಳು

149 (1438) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ನಿಲ್ದಾಣದ ವಾಣಿಜ್ಯ ಮಳಿಗೆ ಪರವಾನಗಿದಾರರ ಸಂಘದವರು ಹಾಲಿ ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕೆಂದು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರದ ನಿಲುವೇನು?

ಇ) ಹಾಲಿ ನಿಯಾಮಾವಳಿಗಳನ್ನು ಯಾವಾಗ ಮಾರ್ಪಾಡು ಮಾಡಲಾಗುವುದು?:

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಬೇಡಿಕೆ ಸೂಕ್ತವಾಗಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದ ವಾಣಿಜ್ಯ ಮಳಿಗೆ ಪರವಾನಿಗೆದಾರರ ಸಂಘದವರು ಹಾಲಿ ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕೆಂದು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇಂದು ರಾಜ್ಯದಲ್ಲಿರುವ ಎಲ್ಲಾ ಬಸ್ ನಿಲ್ದಾಣದ ಹೋಟೆಲ್‌ಗಳಲ್ಲಿ ಕಳಪೆ ಗುಣಮಟ್ಟದ ತಿಂಡಿ ಪದಾರ್ಥಗಳನ್ನು ಕೊಡುತ್ತಿದ್ದಾರೆ. ಎದುರುಗಡೆ ಅಂಗಡಿಯವರು ಐವತ್ತು ಸಾವಿರ ರೂಪಾಯಿ ಬಾಡಿಗೆ ಕೊಟ್ಟುಕೊಂಡು ಹೋಗುತ್ತಿದ್ದರೆ ನಮಗೆ ಒಂದು ಲಕ್ಷದವರೆಗೆ ಬಾಡಿಗೆ ಕೊಡಬೇಕಾಗಿದೆ. ಆದ್ದರಿಂದ ನಾವು ಎಂಥ ಗುಣಮಟ್ಟವನ್ನು ಕಾಪಾಡಿಕೊಂಡು